ರಾಜ್ಯ ಸರ್ಕಾರದ ಹುದ್ದೆಗಳಿಗೆ ನೇಮಕಾತಿಯಲ್ಲಿ ಗರಿಷ್ಠ ವಯೋಮಿತಿಯ ಸಡಿಲಿಕೆ ಬಗ್ಗೆ

237 ಶ್ರೀ ಎಂ. ರೇವಣ್ಣ (ಮಾಗಡಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) *ರಾಜ್ಯ ಸರ್ಕಾರದ ಹುದ್ದೆಗಳಿಗೆ ನೇಮಕಾತಿಯಲ್ಲಿ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ವಿಷಯ ಸರ್ಕಾರ ಪರಿಶೀಲನೆಯಲ್ಲಿದೆಯೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಹೌದು.

ಕಲ್ಲು ಗುತ್ತಿಗೆದಾರರ ಬಗ್ಗೆ.

239 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಾಗಡಿ ತಾಲ್ಲೂಕಿನಲ್ಲಿರುವ ಕಲ್ಲು ಗಣಿ ಗುತ್ತಿಗೆದಾರರ ಸಂಖ್ಯೆ ಎಷ್ಟು?*

ಆ) *ಅದರಲ್ಲಿ ಸದರಿ ಗುತ್ತಿಗೆದಾರರು ಪಡೆದಿರುವ ಜಮೀನು ಎಷ್ಟು? ಹಾಗೂ ಪಟ್ಟಾ ಜಮೀನು ಎಷ್ಟು?*

ಇ) *ಅಕ್ರಮವಾಗಿ ಕಲ್ಲು ಸಾಗಾಣಿಕೆಯಾಗುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ, ಸರ್ಕಾರವು ಅದನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮಗಳೇನು?*

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು) :

ಅ) 10

ಆ) 118.15 ಎಕರೆಗಳು ಸರ್ಕಾರಿ ಜಮೀನು ಮತ್ತು ಪಟ್ಟಾ ಜಮೀನು ಇರುವುದಿಲ್ಲ.

ಇ) ಬಂದಿರುತ್ತದೆ.

ಈ) ನಿಯತಕಾಲಿಕ ತನಿಖೆಯಲ್ಲಿ ಎಲ್ಲಿಯಾದರೂ ಅನಧಿಕೃತ ಕಲ್ಲುಗಣಿಗಾರಿಕೆಯ ಗಮನಕ್ಕೆ ಬಂದಿರುವ ಸಮಯದಲ್ಲಿ ಅಂತಹ ಕಲ್ಲು ಗಣಿಕಾರಿಕೆಯನ್ನು ಇಲಾಖೆ ಅಧಿಕಾರಿಗಳು ನಿಲ್ಲಿಸಿರುತ್ತಾರೆ.

ಲೋಕಸೇವಾ ಆಯೋಗದ ಬಗ್ಗೆ

240 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯವಲ್ಲಿ ಕಳೆದ ನಾಲ್ಕು ವರ್ಷದಿಂದ ಕೆ.ಎ.ಎಸ್. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸದಿರುವುದು ನಿಜವೆ,*

ಆ) *ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು?*

ಇ) *ಸದರಿ ಪರೀಕ್ಷೆಗಳನ್ನು ಯಾವಾಗ ಮತ್ತು ಎಷ್ಟು ವರ್ಷದೊಳಗೆ ನಡೆಸಲಾಗುತ್ತದೆ.*

ಈ) *ಈ ಮೇಲಿನ ಪರೀಕ್ಷೆಗಳಿಗೆ ವಯೋಮಿತಿಯನ್ನೇನಾದರು ಸಡಿಲಿಸಲಾಗುವುದೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಮಿತವ್ಯಯ ಆದೇಶಗಳ ಚಾಲ್ತಿ ಮತ್ತು ನೇರ ನೇಮಕಾತಿಯ ನಿರ್ಬಂಧ.

ಇ) ಈ ವಿಷಯ ಪರಿಶೀಲನೆಯಲ್ಲಿದೆ.

ಈ) ಈ ವಿಷಯ ಪರಿಶೀಲನೆಯಲ್ಲಿದೆ.

ಬೆಂಗಳೂರು ನಗರ ವಿವಿಧ ಭಾಗಗಳಲ್ಲಿ ವಿದ್ಯುತ್ ಪರಿವರ್ತಕಗಳನ್ನು ಸ್ಥಾಪಿಸಿರುವುದು.

5 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಕಳೆದ 40 ವರ್ಷಗಳಿಂದ ಬೆಂಗಳೂರು ನಗರ ವಿವಿಧ ಭಾಗಗಳಲ್ಲಿ ವಿದ್ಯುತ್ ಪರಿವರ್ತಕಗಳನ್ನು ಸ್ಥಾಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಇಕ್ಕಟ್ಟಿನ ಸ್ಥಳಗಳಲ್ಲಿ ಹಿಂದೆ ಸ್ಥಾಪಿಸಲಾಗಿರುವ ವಿದ್ಯುತ್ ಪರಿವರ್ತಕಗಳು ಜೀವ, ಆಸ್ತಿಗಳಿಗೆ ಮತ್ತು ಸಂಚಾರಕ್ಕೆ ಅಪಾಯ ಒಡ್ಡುವ ಸ್ಥಿತಿಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಒಂದಲ್ಲ ಒಂದು ಕಾರಣದಿಂದ ಸಂಬಂಧಪಟ್ಟ ಅಧಿಕಾರಿಗಳು ಈ ವಿದ್ಯುತ್ ಪರಿವರ್ತಕಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಆ ಪ್ರದೇಶದ ನಿವಾಸಿಗಳು ಪದೇ ಪದೇ ಮನವಿ ಮಾಡಿಕೊಂಡರೂ ಗಮನಕ್ಕೆ ತೆಗೆದುಕೊಳ್ಳದೇ ಇರುವುದು ನಿಜವೇ?

ಈ) ಸರ್ಕಾರವು ಮಂಡಳಿಯ ಅಧಿಕಾರಿಗಳಿಗೆ ಈ ವಿದ್ಯುತ್ ಪರಿವರ್ತಕಗಳನ್ನು ಸ್ಥಳಾಂತರಿಸಿ ಜನಗಳಿಗೆ ತೊಂದರೆ ನಿವಾರಣೆ ಮಾಡಲು ಆದೇಶಿಸುವುದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಹೌದು.

ಆ) ವಿದ್ಯುಚ್ಛಕ್ತಿ ಮಂಡಳಿಯು ಸಾಮಾನ್ಯವಾಗಿ ಲೋಡ್ ಸೆಂಟರ್‌ಗಳಲ್ಲಿ ವಿದ್ಯುತ್ ಪರಿವರ್ತಕಗಳನ್ನು ಕಾಲುದಾರಿ, ಗಲ್ಲಿಗಳನ್ನು ಸಾರ್ವಜನಿಕರಿಗೆ ಅನಾನುಕೂಲವಾಗದ ರೀತಿಯಿಂದ ಭಾರತೀಯ ವಿದ್ಯುಚ್ಛಕ್ತಿ ನಿಯಮ 1956 ಅನುಗುಣವಾಗಿ ಸ್ಥಾಪಿಸುತ್ತಿದೆ.

ಬೆಳೆಯುತ್ತಿರುವ ನಗರ ಮತ್ತು ರಸ್ತೆಯನ್ನು ಅಗಲ ಮಾಡುವುದರಿಂದ ನಗರದ ಕೆಲವು ಪ್ರದೇಶಗಳಲ್ಲಿ ಕೆಲವು ವಿದ್ಯುತ್ ಪರಿವರ್ತಕಗಳು ಇಕ್ಕಟ್ಟಿನ ಸ್ಥಳಗಳಲ್ಲಿವೆ. ಈ ಪರಿವರ್ತಕಗಳು ಜೀವಕ್ಕೆ, ಆಸ್ತಿಗಳಿಗೆ ಮತ್ತು ಸಂಚಾರಕ್ಕೆ ಅಪಾಯ ಒಡ್ಡುವ ಸ್ಥಿತಿಯಲಿಲ್ಲ. ಕಾರಣ ಇವುಗಳಿಗೆ ಬೇಲಿ ಮತ್ತು ಸರಿಯಾದ ರೀತಿಯಲ್ಲಿ ಗ್ರೌಂಡ್ ಮಾಡಲಾಗಿದೆ.

ಇ) ವಿದ್ಯುಚ್ಛಕ್ತಿ ಮಂಡಳಿಯು (ಸೂಕ್ತ ಸಮಯದಲ್ಲಿ) ಸಾಧ್ಯವಿದ್ದಲ್ಲಿ ಇಕ್ಕಟ್ಟಿನ ಸ್ಥಳಗಳಲ್ಲಿರುವ ವಿದ್ಯುತ್ ಪರಿವರ್ತಕಗಳನ್ನು ಈಗಿರುವ ಸ್ಥಳದಿಂದ ಹತ್ತಿರ ಅನುಕೂಲ ಸ್ಥಳ ಲಭ್ಯವಿದ್ದರೆ ಹಾಗೂ ಅರ್ಜಿದಾರರು ಸ್ಥಳಾಂತರಿಸುವ ವೆಚ್ಚವನ್ನು ಪಾವತಿ ಮಾಡಲು ಸಿದ್ಧರಿದ್ದರೆ, ಈ ಬಗ್ಗೆ ಸಕಾಲಿಕ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) (ಅ) ಮತ್ತು (ಆ) ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಮಂಗಳೂರಿನ ಜಿಲ್ಲಾ ಕಛೇರಿ ಕಟ್ಟಡ ಸಂಕೀರ್ಣ ನಿರ್ಮಾಣ ಕಾರ್ಯದ ಬಗ್ಗೆ

101 - ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಮಂಗಳೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಮಂಗಳೂರಿನಲ್ಲಿ ಜಿಲ್ಲಾ ಕಛೇರಿ ಕಟ್ಟಡ ಸಂಕೀರ್ಣದ ನಿರ್ಮಾಣ ಯಾವಾಗ ಪ್ರಾರಂಭವಾಯಿತು?